**ಸಾಕ್ಷಿಯನ್ನು ದಿಃ 07.03.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

ನಾನು ದಿಃ 26.04.2003 ರಂದು ಹುಟ್ಟಿರುತ್ತೇನೆ. ನನ್ನ ತಂದೆ ಗಾರೆ ಕೆಲಸ ಮಾಡುತ್ತಾರೆ. ನನ್ನ ತಾಯಿ ಗೃಹಿಣಿಯಾಗಿದ್ದು ಮನೆಯಲ್ಲಿದ್ದಾರೆ. ನನ್ನ ಅಣ್ಣ ಬಿ.ಇ. ಇಂಜಿನಿಯರಿಂಗ್ ಮಾಡುತ್ತಿದ್ದಾರೆ. ನಮ್ಮ ಮನೆಯ ಖರ್ಚು ವೆಚ್ಚವನ್ನು ನನ್ನ ತಂದೆ ನೋಡಿಕೊಳ್ಳುತ್ತಾರೆ ಎಂದರೆ ಸರಿ. ನಾನು ಆ ದಿನ ನನ್ನ ತಂದೆಯ ಜೊತೆ ದ್ವಿಚಕ್ರ ವಾಹದಲ್ಲಿ ಹಿಂಬದಿ ಸವಾರಳಾಗಿ ಹೋಗುತ್ತಿದ್ದೆ. ನಾವು ಆ ದಿನ ಹೆಲ್ಮೆಟ್ ಹಾಕಿರಲಿಲ್ಲ ಎಂದರೆ ಸರಿ. ನನ್ನ ತಂದೆಗೆ ಚಾಲನ ಪರವಾಗಿ ಇದೆ ಅದನ್ನು ಹಾಜರು ಪಡಿಸಲು ತೊಂದರೆ ಇಲ್ಲ. ನಾವು ಆ ದಿನ ನಂಜನಗೂಡಿನಿಂದ ಟಿ.ನರಸೀಪುರಕ್ಕೆ ಹೋಗುತ್ತಿದ್ದೇವು. ಬೈಕ್ ಅನ್ನು ನನ್ನ ತಂದೆ ರಸ್ತೆಯ ಬಲಭಾಗದಲ್ಲಿ ಚಲಾಯಿಸುತ್ತಿದ್ದರು ಎಂದರೆ ಸರಿಯಲ್ಲ. ಮುಂದುವರೆದು ಎಡಭಾಗದಲ್ಲಿ ಚಲಾಯಿಸುತ್ತಿದ್ದರು ಎಂದು ಉತ್ತರಿಸಿರುತ್ತಾರೆ. ಮೋಟಾರ್ ಸೈಕಲ್ ಮತ್ತು ಬಸ್ಸನ್ನು ಪೋಲೀಸರು ಅಮಾನತು ಪಡಿಸಿಕೊಂಡಿರುತ್ತಾರೆ. ನನ್ನ ತಂದೆ ಎಷ್ಟು ಹಣ ಕಟ್ಟಿ ಮೋಟಾರ್ ಸೈಕಲ್ ಬಿಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು 3-4 ಸಾವಿರ ಇರಬಹುದು ನನಗೆ ಗೊತ್ತಿಲ್ಲ ಎಂದು ಉತ್ತರಿಸಿರುತ್ತಾರೆ. ನಾನು ಟೈಲರಿಂಗ್ ಕೆಲಸವನ್ನು ಮನೆಯಲ್ಲಿಯೇ ಮಾಡುತ್ತೇನೆ. ನಮ್ಮ ಊರಿನಲ್ಲಿ ಕಡಿಮೆ ಮನೆಗಳು ಇವೆ ಎಂದರೆ ಸರಿ. ಹಳ್ಳಿಯಾದ ಕಾರಣ ಕಡಿಮೆ ಜನ ಇದ್ದ ಕಾರಣ ಹೆಚ್ಚು ಜನ ಬಟ್ಟೆ ಹೊಲಿಕೊಳ್ಳಲು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಟೈಲರಿಂಗ್ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಇದೆ ಅದನ್ನು ಹಾಜರು ಪಡಿಸಲು ತೊಂದರೆ ಇಲ್ಲ. ತಿಂಗಳಿಗೆ ರೂ. 30,000/- ಸಂಪಾದನೆ ಮಾಡುತ್ತಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜನವರಿ 2025 ರಂದು ನನಗೆ ಎಷ್ಟು ಆದಾಯ ಇತ್ತು ಎಂದರೆ ಸಾಕ್ಷಿಯು ನಾನು ಜನವರಿ 2025 ರಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂದು ಉತ್ತರಿಸಿರುತ್ತಾರೆ.

ಮೊದಲಿಗೆ ಟಿ ನರಸೀಪುರದ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿಂದ ಮೈಸೂರಿನ ಕೆ.ಆರ್. ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಕೆ.ಆರ್. ಆಸ್ಪತ್ರೆಯಲ್ಲಿ ಒಂದು

ಗಂಟೆ ಇದ್ದು ಅಲ್ಲಿಂದ ಜೆ.ಎಸ್.ಎಸ್ ಆಸ್ಪತ್ರೆಯಲ್ಲಿ 15 ದಿನ ಒಳರೋಗಿಯಾಗಿ ದಾಖಲಾಗಿರುತ್ತೇನೆ. ಗುಣಮುಖ ಆದ ಕಾರಣ ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆನಂತರ ಬೆಂಗಳೂರಿನ ಹೊಸಮತ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿರುತ್ತೇನೆ. ಅಲ್ಲಿ ಮೂರು ತಿಂಗಳು ದಾಖಲಾಗಿದ್ದು ಸದರಿ ಆಸ್ಪತ್ರೆಯಲ್ಲಿ ನನ್ನ ಕಾಲಿನ ನರ ತೆಗೆದು ಭುಜಕ್ಕೆ ಹಾಕಿರುತ್ತಾರೆ. 9 ತಿಂಗಳ ಅವಧಿಯ ಒಳಗೆ ಸುಧಾರಣೆ ಆಗುತ್ತದೆ ಎಂದು ಹೇಳಿರುತ್ತಾರೆ. 9 ತಿಂಗಳು ಆದರೂ ಯಾವುದೇ ಸುಧಾರಣೆ ಆಗಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಇತ್ತೀಚಿಗೆ ಒಂದು ತಿಂಗಳ ಹಿಂದೆ ಆಸ್ಪತ್ರೆಗೆ ಹೋಗಿದ್ದೆ. ನನ್ನ ಬಲ ಕೈ ಸಂಪೂರ್ಣ ಸ್ವಾಧೀನತೆ ಹೋಗಿದ್ದು ಸ್ವಾಧೀನ ಬರಲು ಇನ್ನೂ ಸಮಯ ಬೇಕಾಗುತ್ತದೆ ಎಂದು ವೈಧ್ಯರು ಹೇಳಿರುತ್ತಾರೆ. ದೂರನ್ನು ನನ್ನ ಅಣ್ಣ ದಾಖಲಿಸಿರುತ್ತಾನೆ. ಪೋಲೀಸರು ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಹೆಚ್ಚಿನ ಪರಿಹಾರಕ್ಕಾಗಿ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.